ಅಧೀಕ್ಷಕರು	-	1
ಪರ್ಯಾವೈಜ್ಞಕರು	-	30
ಅಧೀಕ್ಷಕರು (ಆ)	-	1
ಪ್ರ. ದ. ಭೂ	-	119
ದ್ವಿ. ದ. ಭೂ	-	3
ಪ್ರ. ದ. ಸ	-	6
ದ್ವಿ. ದ. ಸ.	-	9
ಸ. ಬೆರಳಚ್ಚುಗಾರರು	-	5
ಬೆರಳಚ್ಚುಗಾರರು	-	1
ವಾಹನಚಾಲಕರು	-	3
ದಪ್ತರ್ ಬಂದ್	-	6
ಕಚೇರಿ ಜವಾನರು	-	15
ಬಾಂದು ಜವಾನರು	-	144
	ಒಟ್ಟು	338

ಸಂಕೇಶ್ವರ ಕ್ರೀಡಾಂಗಣ ನಿರ್ಮಾಣ

586 (756) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿಗೆ ಒದಗಿಸಿರುವ ಹಣವೆಷ್ಟು? ಇಲ್ಲಿಯವರೆಗೆ ಎಷ್ಟು ಖರ್ಚು ಮಾಡಲಾಗಿದೆ?

ಆ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಇದನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಈ ಕಾಮಗಾರಿಗೆ ಇದುವರೆಗೆ ಬಿಡುಗಡೆ ಮಾಡಿದ ಹಣ 25.69 ಲಕ್ಷ ರೂ.ಗಳು. 20.69 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಬಾಕಿ ಇರುವ ಮೂಲಗಳಿಂದ ಹಣ ಸಂಗ್ರಹಿಸಿದ ಕೂಡಲೇ ಪೂರ್ಣಗೊಳಿಸಲಾಗುವುದು.

ಇ) ತೊಂದರೆ ಇರುವುದಿಲ್ಲ.

ಗಡಿ ಭಾಗದ ರಸ್ತೆಗಳ ನಿರ್ಮಾಣ

587 (757) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಗಡಿಭಾಗದಲ್ಲಿನ ರಸ್ತೆಗಳನ್ನು ನಿರ್ಮಾಣ ಮಾಡಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಆ) ರಾಜ್ಯದಲ್ಲಿ ಒಟ್ಟು ಎಷ್ಟು ಕಿಮೀ ಈ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ; ಇವುಗಳ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಆ) ಗಡಿಭಾಗದ ರಸ್ತೆಗಳ ಅಭಿವೃದ್ಧಿಗೆ ರೂ. 670 ಲಕ್ಷಗಳ ಕಾರ್ಯಕ್ರಮವನ್ನು ಆಂತರರಾಜ್ಯ ಪ್ರಾಮುಖ್ಯತೆ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಲು ಸಲ್ಲಿಸಲಾಗಿದೆ.

ಆ) ಯೋಜನೆಯು ಇನ್ನು ಆರಂಭಗೊಂಡಿರುವುದಿಲ್ಲ. 68 ಕಿ.ಮೀ ಉದ್ದದ ರಸ್ತೆಯನ್ನು ಪ್ರಸ್ತಾವಿಸಲಾಗಿದೆ. ಕಾಮಗಾರಿಯು ಇನ್ನು ಪ್ರಾರಂಭವಾಗಿರುವುದಿಲ್ಲ, ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಸಂಕೇಶ್ವರ ವಿಶೇಷ ತಹಸೀಲ್ದಾರರ ಹುದ್ದೆಯನ್ನು ಸೃಜಿಸುವುದು

588 (758) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಉದ್ದೇಶ ಸರ್ಕಾರ ಹೊಂದಿದೆಯೇ

ಆ) ತಾಲ್ಲೂಕು ಕೇಂದ್ರ ರಚಿಸುವಂತಹ ಸ್ಥಳಗಳಿಗೆ ವಿಶೇಷ ತಹಸೀಲ್ದಾರರ ಹುದ್ದೆಗಳನ್ನು ಸೃಜಿಸುತ್ತಿರುವುದು ನಿಜವೇ? ಹಾಗಿದ್ದಲ್ಲಿ ಸಂಕೇಶ್ವರಕ್ಕೆ ವಿಶೇಷ ತಹಸೀಲ್ದಾರ್ ಹುದ್ದೆಯನ್ನು ಸೃಜಿಸಲಾಗುತ್ತಿದೆಯೇ?

ಇ) ಇದನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಆ) ಇ) ಹೊಸ ತಾಲ್ಲೂಕುಗಳನ್ನು ಸೃಜಿಸುವ ಅವರ ಬಗ್ಗೆ ಈ ಹಿಂದಿನ 3 ಸಮಿತಿಗಳು ಪರಿಶೀಲನೆಯಲ್ಲಿ ಹೊಸ ತಾಲ್ಲೂಕುಗಳನ್ನು ಸೃಜಿಸುವ ಪ್ರಶ್ನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ ಆದರೆ, ಆಡಳಿತದಲ್ಲಿ ದಕ್ಷತೆಯನ್ನು ವೃದ್ಧಿಸಬೇಕೆಂಬ ದೃಷ್ಟಿಯಿಂದ ಕೆಲವೊಂದು ಸ್ಥಳಗಳಿಗೆ ವಿಶೇಷ ತಹಸೀಲ್ದಾರರನ್ನು ನೇಮಿಸಲಾಗಿದೆ. ಸಂಕೇಶ್ವರವನ್ನು ಹೊಸ ತಾಲ್ಲೂಕನ್ನಾಗಿ ಸೃಜಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಬರಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ದೊರೆತ ಅನುದಾನ

589 (644) ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರದಿಂದ ಪ್ರಸಕ್ತ ಸಾಲಿನಲ್ಲಿ ಬರಕಾಮಗಾರಿಗಾಗಿ ಬಿಡುಗಡೆಯಾದ ಹಣ ಎಷ್ಟು; ರಾಜ್ಯ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು;

ಆ) ಎಷ್ಟು ವೆಚ್ಚ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಕೇಂದ್ರ ಸರ್ಕಾರ ಬರ ಕಾಮಗಾರಿಗಾಗಿ ಬಿಡುಗಡೆ ಮಾಡಿದ ಆಹಾರಧಾನ್ಯ ಎಷ್ಟು; ರಾಜ್ಯ ಸರ್ಕಾರ ಎಷ್ಟು ಎತ್ತುವಳಿ ಮಾಡಿದೆ;